ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ

Spl. Lok. 6/2014

| | | | | |
|---|---|---|---|---|
| ಸಾಕ್ಷಿದಾರರ ಹೆಸರು | ಃ | ಹೆಚ್.ಆರ್. ಶಿವರುದ್ರಾಚಾರ್ | ಪಿ.ಡಬ್ಲ್ಯೂ. | 5 |
| ತಂದೆಯ ಹೆಸರು | ಃ | ಬಿ. ರೇವಪ್ಪ ಚಾರ್ | ಸಿ.ಡಬ್ಲ್ಯೂ. | 5 |
| ವಯಸ್ಸು | ಃ | 59 ವರ್ಷ | | |
| ಉದ್ಯೋಗ | ಃ | ಸರ್ವೆ ಸೂಪರ್ ವೈಸರ್. ಎ.ಡಿ.ಎಲ್.ಆರ್. ಕಛೇರಿ, ಹರಪನಹಳ್ಳಿ. | | |
| ವಾಸ ಸ್ಥಳ | ಃ | ದಾವಣಗೆರೆ. | | |

ದಿ.08.07.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ (ಶ್ರೀ ಪಿ.ವೈ.ಹೆಚ್.)** ಃ

1. 2011 ರಿಂದ 2019 ರ ವರೆಗೆ ಸರ್ವೆಯರ್ ಆಗಿ ದಾವಣಗೆರೆಯ ಸರ್ವೆ ಕಛೇರಿಯಲ್ಲಿ ಕೆಲಸ ಮಾಡಿದ್ದೇನೆ.

2. ದಿ.30.07.2013 ರಂದು ನನ್ನನ್ನು ಸಂಜೆ ದಾವಣಗೆರೆಯಲ್ಲಿರುವ ತಾಲ್ಲೂಕು ಕಛೇರಿಗೆ ಲೋಕಾಯುಕ್ತ ಪೋಲೀಸರು ಕರೆಸಿದ್ದರು. ಆರೋಪಿ ವೆಂಕಟೇಶ್ ಟ್ರ್ಯಾಪ್ ಆಗಿದ್ದಾರೆ ನೀವು ಬನ್ನಿ ಎಂದು ಹೇಳಿ ಕರೆಸಿದ್ದರು. ಆರೋಪಿ ನನಗೆ ಮೊದಲೇ ಪರಿಚಯ. ಆರೋಪಿಯು ದಾವಣಗೆರೆಯ ತಹಶೀಲ್ದಾರ ಕಛೇರಿಯಲ್ಲಿ ಸರ್ವೆ ಸೂಪರ್ ವೈಸರ್ ಆಗಿ ನಿವೃತ್ತಿಯಾಗಿದ್ದರು. ನಿವೃತ್ತಿಯಾದ ನಂತರವೂ ಸಹ ಆರೋಪಿಯು ಗೌರವ ಧನದ ಆಧಾರದ ಮೇಲೆ ದಾವಣಗೆರೆಯ ಸರ್ವೆ ಕಛೇರಿಯಲ್ಲಿ ಸರ್ವೆಯರ್ ಆಗಿ ಕೆಲಸ ಮಾಡುತ್ತಿದ್ದರು.

3. ಲೋಕಾಯುಕ್ತ ಪೋಲೀಸರು ನನ್ನನ್ನು ಕಛೇರಿಗೆ ಕರೆಸಿದ್ದ ಸಂದರ್ಭದಲ್ಲಿ ನಾನು ಪ್ರಭಾರ ಸೂಪರ್ ವೈಸರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ನಾನು ಫೀಲ್ಡ ಕೆಲಸಕ್ಕಾಗಿ ಹೋಗಿದ್ದಾಗ

ಲೋಕಾಯುಕ್ತ ಪೋಲೀಸರು ನನ್ನನ್ನು ಸಂಜೆ 6.00 ಗಂಟೆಗೆ ಕರೆಸಿದ್ದರು. ಯರವ್ವನಾಗ್ತಿಹಳ್ಳಿ ಸರ್ವೆ ನಂಬರ್ ನ ಜಮೀನಿನ ಹದ್ದು ಬಸ್ತಿಗೆ ಸಂಬಂಧಪಟ್ಟಂತೆ ನಾಗೇಶ್ವರರಾವ್ ಮತ್ತು ಇನ್ನೊಬ್ಬ ವ್ಯಕ್ತಿ ಕೊಟ್ಟ ದೂರಿನ ಮೇರೆಗೆ ಆರೋಪಿಯು ಟ್ರ್ಯಾಪ್ ಆಗಿದ್ದಾನೆಂದು, ಆಡಿಯೋ ಮತ್ತು ವೀಡಿಯೋ ಕೇಳಿಸಿಕೊಳ್ಳಲು ನನ್ನನ್ನು ಕರೆಸಿದ್ದರು. ಲೋಕಾಯುಕ್ತ ಪೋಲೀಸರು ನನಗೆ ಆರೋಪಿಯ ಧ್ವನಿಯನ್ನು ಕೇಳಿಸಿದರು. ನಾನು ಧ್ವನಿಯನ್ನು ಗುರುತಿಸಿರುತ್ತೇನೆ. ಆರೋಪಿಯು ನಮ್ಮಲ್ಲಿ ಕೆಲಸ ಮಾಡಿದ್ದರಿಂದ ನಾನು ಆರೋಪಿಯ ಧ್ವನಿಯನ್ನು ಗುರುತಿಸಿರುತ್ತೇನೆ ಹಾಗೂ ಕಂಪ್ಯೂಟರಿನಲ್ಲಿ ವೀಡಿಯೋ display ಮಾಡಿ ಆರೋಪಿಯ ಪೋಟೋ ತೋರಿಸಿದರು. ನಾನು ಆರೋಪಿಯನ್ನು ಈತನೇ ವೆಂಕಟೇಶ್ ಎಂದು ಗುರುತಿಸಿರುತ್ತೇನೆ. ಈ ಮೇಲ್ಕಂಡ ಜಮೀನಿನ ಹದ್ದು ಬಸ್ತಿಗೆ ಸಂಬಂಧಿಸಿದಂತೆ ದಾಖಲೆಗಳಿಗೆ ನಾನೇ ಸಹಿ ಮಾಡಿ ಕೊಟ್ಟಿದ್ದೆ. ಸದರಿ ದಾಖಲೆಗಳನ್ನು ಲೋಕಾಯುಕ್ತ ಪೋಲೀಸರು ನನಗೆ ತೋರಿಸಿದ್ದು, ನಾನು ಗುರುತಿಸಿರುತ್ತೇನೆ. ಸದರಿ ದಾಖಲೆಗಳನ್ನು ನಾನು ದೃಢೀಕರಿಸಿ, ನನ್ನ ಸಹಿ ಮಾಡಿ ಕೊಟ್ಟಿರುತ್ತೇನೆ. ಸದರಿ ದಾಖಲೆಗಳು ದಾಖಲೆ ಸಂಖ್ಯೆ 11 ರಲ್ಲಿ ಪುಟ ಸಂಖ್ಯೆ 32 ರಿಂದ 59 ಎಂದಿರುತ್ತವೆ. ಸದರಿ ದಾಖಲೆ ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದೆ. ಪುಟ ಸಂಖ್ಯೆ 59 ರಲ್ಲಿ ಈ ಸಾಕ್ಷಿಯು ತನ್ನ ಸಹಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-4(ಬಿ)** ಎಂದು ಗುರುತಿಸಲಾಯಿತು. ಈ ಬಗ್ಗೆ ಲೋಕಾಯುಕ್ತ ಪೋಲೀಸರು ನನ್ನ ಹೇಳಿಕೆ ಪಡೆದಿದ್ದಾರೆ.

**ಪಾಟೀ ಸವಾಲು : ಶ್ರೀಮತಿ ಕೆ.ಎನ್.ಯು ವಕೀಲರಿಂದ ಆರೋಪಿತನ ಪರವಾಗಿ** :
ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ .

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.